## ಕರ್ನಾಟಕ ವಿಧಾನ ಪರಿಷತ್ತು

5. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 931
6. ಮಾನ್ಯ ಸದಸ್ಯರ ಹೆಸರು : ಡಾ.ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)
7. ಉತ್ತರಿಸಬೇಕಾದ ದಿನಾಂಕ : 19.08.2025
8. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಯುವ ರೈತರಿಗೆ ಪ್ರತಿ ಟನ್ ಗೆ ನಿಗಧಿಪಡಿಸಲಾಗಿರುವ ದರ ಎಷ್ಟು; | ಕೇಂದ್ರ ಸರ್ಕಾರದ ಸಕ್ಕರೆ ನಿರ್ದೇಶನಾಲಯವು 2025-26ನೇ ಸಕ್ಕರೆ ಹಂಗಾಮಿಗೆ ಸಂಬಂಧಿಸಿದಂತೆ ಕಬ್ಬಿನ ಬೆಲೆಯ ಕುರಿತು ದಿನಾಂಕ:06.05.2025ರಂದು ಮಾರ್ಗಸೂಚಿಗಳನ್ನು ಹೊರಡಿಸಿದ್ದು ಸದರಿ ಮಾರ್ಗಸೂಚಿಗಳನ್ವಯ ಕಬ್ಬಿನ ಬೆಲೆಯು ಈ ಕೆಳಕಂಡಂತೆ ಇರುತ್ತದೆ.<br>1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.355.00<br>2. ಶೇಕಡ 10.25ಕ್ಕೆ ಮೇಲ್ಪಟ್ಟ ಇಳುವರಿಗೆ ತದನಂತರದ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.3.46 ರಂತೆ ಹೆಚ್ಚುವರಿ ಬೆಲೆ..<br>3. ಶೇಕಡ 10.25ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕಿಂತ ಮೇಲ್ಪಟ್ಟ ಇಳುವರಿಯನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಶೇಕಡ 0.1 ರಷ್ಟು ಕಡಿಮೆ ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3.46ರಷ್ಟು ಪ್ರಮಾಣದಲ್ಲಿ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.<br>4. ಶೇಕಡ 9.5 ರಷ್ಟು ಅಥವಾ 9.50 ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.329.05 ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ ನಿಗದಿಪಡಿಸುವುದು. |
| (ಆ) | ಯಾವ ಮಾನದಂಡಗಳ ಮೇಲೆ ಸದರಿ ದರಗಳನ್ನು ನಿಗದಿಪಡಿಸಲಾಗಿದೆ? | ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (Commission for Agriculture Cost and Price) ಕಬ್ಬು ಬೆಳೆಯುವ ರಾಜ್ಯಗಳಿಗೆ ಭೇಟಿ ನೀಡಿ ಕಬ್ಬು ಉತ್ಪಾದನೆಯ ವೆಚ್ಚ, ಪರ್ಯಾಯ ಬೆಳೆಗಳಿಂದ ಸಿಗುವ ಆದಾಯ, ಕಬ್ಬಿನಿಂದ ಲಭ್ಯವಾಗುವ ಸಕ್ಕರೆ ಇಳುವರಿ ಪ್ರಮಾಣ, ಸಕ್ಕರೆ ಕಾರ್ಖಾನೆಗಳಿಂದ ಮಾರಾಟವಾಗುವ ಸಕ್ಕರೆಯ ಬೆಲೆ, ಕಬ್ಬಿನ ಉಪ-ಉತ್ಪನ್ನಗಳ ಮಾರಾಟದಿಂದ ಬರುವ ಆದಾಯ, ರೈತರಿಗೆ ಲಭಿಸಬೇಕಾದ ಸೂಕ್ತ ಲಾಭಾಂಶಗಳ ಕುರಿತು ಸಂಬಂಧಿಸಿದ ಪಾಲುದಾರರಾದ ರಾಜ್ಯ ಸರ್ಕಾರ, ರೈತ ಪ್ರತಿನಿಧಿಗಳು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಆಯಾ ವರ್ಷದಲ್ಲಿ ಕಬ್ಬಿಗೆ ನಿಗದಿಗೊಳಿಸಬೇಕಾದ ಬೆಲೆಯ ಕುರಿತು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತದೆ. ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ವರದಿಯನ್ನು ಆಧರಿಸಿ ಆಯಾ ವರ್ಷದಲ್ಲಿ ಪ್ರತಿ ಕ್ವಿಂಟಾಲ್ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಕೇಂದ್ರ ಸರ್ಕಾರವು ಘೋಷಿಸುತ್ತದೆ. |

| | | |
|---|---|---|
| (ಇ) | ರಾಜ್ಯದ ವಿವಿಧ ಕಬ್ಬು ಕಾರ್ಖಾನೆಗಳಲ್ಲಿ ಒಂದೊಂದು ರೀತಿಯ ದರಗಳನ್ನು ನಿಗಧಿಪಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br>ಕೇಂದ್ರ ಸರ್ಕಾರವು ನಿಗದಿಪಡಿಸುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಮಾರ್ಗಸೂಚಿಗಳು ಇಡೀ ದೇಶಕ್ಕೆ ಅನ್ವಯವಾಗುತ್ತದೆ. ಕೇಂದ್ರ ಸರ್ಕಾರವು ಘೋಷಿಸುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ಮಾರ್ಗಸೂಚಿ ದರಗಳನ್ನು ಹಾಗೂ ರಾಜ್ಯದ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಹಿಂದಿನ ವರ್ಷ ಪಡೆದ ಸಕ್ಕರೆ ಇಳುವರಿಯನ್ನು ಆಧರಿಸಿ ಲೆಕ್ಕಾಚಾರ ಮಾಡಿ, ರಾಜ್ಯದ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಕಬ್ಬಿನ ತಳಿ, ಮಣ್ಣು, ನೀರಾವರಿ, ವಾಯುಗುಣ ಮತ್ತು ಕಾರ್ಖಾನೆಗಳ ತಂತ್ರಜ್ಞಾನಗಳನ್ನು ಆಧರಿಸಿ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿನ ಸಕ್ಕರೆ ಇಳುವರಿಯ ಅಂಕಿ ಅಂಶಗಳು ಒಂದು ಸಕ್ಕರೆ ಕಾರ್ಖಾನೆಯಿಂದ ಮತ್ತೊಂದು ಸಕ್ಕರೆ ಕಾರ್ಖಾನೆಗೆ ವ್ಯತ್ಯಾಸವಾಗುತ್ತವೆ. ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರದಂತೆ ಹಣ ಪಾವತಿಸುವುದರಿಂದ, ರಾಜ್ಯದ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬೆಲೆಯು ಬೇರೆ ಬೇರೆಯಾಗಿರುತ್ತದೆ. |
| (ಈ) | ತೂಕದ ಯಂತ್ರದಲ್ಲಿ ರೈತರಿಗೆ ಮೋಸವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೂಕದಲ್ಲಿ ರೈತರಿಗೆ ಆಗುತ್ತಿರುವ ಮೋಸವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು? | ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ತೂಕದಲ್ಲಿ ಆಗುತ್ತಿರುವ ಮೋಸವನ್ನು ತಡೆಗಟ್ಟಲು (ವೇ-ಬ್ರಿಡ್ಜ್) ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ಅನುಸರಿಸಬೇಕಾದ ಮಾದರಿ ಕಾರ್ಯಸೂಚಿ ವಿಧಾನಗಳನ್ನು ಸರ್ಕಾರ ಆದೇಶ ಸಂಖ್ಯೆ: ಆನಾಸ/126/ಕಮಾಸೇ/2023 ದಿನಾಂಕ: 27.11.2023 ರನ್ವಯ ಹೊರಡಿಸಲಾಗಿದೆ. ಸದರಿ ಕಾರ್ಯಸೂಚಿಗಳ ವಿಧಾನಗಳನ್ನು ಎಲ್ಲಾ ಸಕ್ಕರೆ ಕಾರ್ಖಾನೆಗಳು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. ಅದರಂತೆ, ಸಕ್ಕರೆ ಕಾರ್ಖಾನೆಗಳು ಅನಲಾಗ್ ತೂಕದ ವ್ಯವಸ್ಥೆಯಿಂದ ಡಿಜಿಟಲ್ ತೂಕದ ವ್ಯವಸ್ಥೆ ಅಳವಡಿಸಿಕೊಂಡಿರುತ್ತಾರೆ ಮತ್ತು ತೂಕದ ಯಂತ್ರಗಳ ನಿಖರತೆಯನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ.<br>ಕಾನೂನು ಮಾಪನಶಾಸ್ತ್ರ, ನಿಯಂತ್ರಕರು, ಬೆಂಗಳೂರು ಇವರ ಅದೇಶ ಸಂಖ್ಯೆ: ಕಾಮಾಇ/ತಪಾಸಣೆ/ಸಿಆರ್-212/2024-25 ಬೆಂಗಳೂರು ದಿನಾಂಕ:16.12.2024 ರಂದು ಕಬ್ಬು ಬೆಳೆಗಾರ ರೈತರ ಹಿತದೃಷ್ಟಿಯಿಂದ 2024-25 ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿನ ವೇ-ಬ್ರಿಡ್ಜ್‌ಗಳನ್ನು ಮತ್ತು ತೂಕ ಅಳತೆ ಸಾಧನಗಳನ್ನು ತಪಾಸಣೆ ಮಾಡಿ, ತೂಕದ ಯಂತ್ರದಲ್ಲಿ ಮೋಸ ಮಾಡಿದಲ್ಲಿ ಮೊಕದ್ದಮೆ ಹೂಡಲು ಸಹಾಯಕ ನಿಯಂತ್ರಕರು /ನಿರೀಕ್ಷಕರುಗಳ ಒಳಗೊಂಡಂತೆ ತಂಡಗಳನ್ನು ರಚಿಸಲಾಗಿರುತ್ತದೆ.<br>ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹಿತ ಕಾಯಲು ಮತ್ತು ತೂಕದಲ್ಲಾಗುವ ಮೋಸ ತಡೆಗಟ್ಟಲು ಎಲ್ಲಾ ಸಕ್ಕರೆ ಕಾರ್ಖಾನೆಗಳ ಬಳಿ ವೇ-ಬ್ರಿಡ್ಜ್‌ಗಳನ್ನು ಎಪಿಎಂಸಿ ಮೂಲಕ ಸ್ಥಾಪಿಸಲು 2024-25ನೇ ಸಾಲಿನ ಆಯವ್ಯಯದಲ್ಲಿ ರೂ.60.00 ಕೋಟಿಗಳನ್ನು ಒದಗಿಸಲಾಗಿರುತ್ತದೆ. ಈ ಸಂಬಂಧ ಕೃಷಿ ಮಾರುಕಟ್ಟೆ ಇಲಾಖಾವತಿಯಿಂದ ಕ್ರಮವನ್ನು ಜರುಗಿಸಲಾಗುತ್ತಿದೆ. |

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ: ಸಿಐ 145 ಎಂಆರ್‌ಇ 2024 ದಿನಾಂಕ:10.12.2024 ರನ್ವಯ ಸಕ್ಕರೆ ಕಾರ್ಖಾನೆಗಳ ಬಳಿ ವೇ-ಬ್ರಿಡ್ಜ್‌ಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ಸ್ಥಾಪಿಸಲು ಪ್ರಥಮ ಹಂತದಲ್ಲಿ 13 ಎ.ಪಿ.ಎಂ.ಸಿ ಗಳಲ್ಲಿ ಗುರುತಿಸಲಾದ 15 ಸ್ಥಳಗಳಲ್ಲಿ ಮತ್ತು ಡಿಜಿಟಲ್ ಮತ್ತು ಟ್ಯಾಂಪರಿಂಗ್ ಪ್ರೂಫ್ ವೇ-ಬ್ರಿಡ್ಜ್‌ಗಳನ್ನು ಸ್ಥಾಪಿಸಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. |

**ಸಂಖ್ಯೆ :** ಸಿಐ 233 ಸಿಓಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು